ದಿನಾಂಕಃ 02-08-2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು.

ಮುಖ್ಯ ವಿಚಾರಣೆ ಶ್ರೀ. ಪಿ.ಡಿ.ಟಿ. ವಾದಿ ಪರ ವಕೀಲರಿಂದ ಃ-

ನಾನು ಈ ದಿನ ನ್ಯಾಯಾಲಯಕ್ಕೆ ಸಲ್ಲಿಸಿರುವ ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಅಂಶಗಳೆಲ್ಲವೂ ಸತ್ಯವಾಗಿವೆ ಹಾಗೂ ನನ್ನ ಪ್ರಮಾಣ ಪತ್ರಕ್ಕೆ ಸಹಿಯನ್ನು ಮಾಡಿರುತ್ತೇನೆ.

ದಾವಾ ಸ್ವತ್ತಿನ ಸಂಬಂಧಪಟ್ಟಂತೆ ಒಟ್ಟು 4 ಪಹಣಿ ಪತ್ರಿಕಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ 4 ಎಂದು, ದಿ. 12/09/2013 ರಂದು ತಹಸೀಲ್ದಾರ್ ರವರು ನೀಡಿದ ಒಂದು ಹಿಂಬರಹ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-5 ಎಂದು, ಎಂ.ಆರ್ ಸಂಖ್ಯೆ 1/2003-04ನ್ನು ಹಾಜರುಪಡಿಸಿದ್ದು ಅದನ್ನು ನಿಪಿ-6 ಎಂದು, ಒಂದು ಹಿಸ್ಸಾ ಟಿಪ್ಪಣಿಯ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-7 ಎಂದು, ಎರಡು ಆಕಾರ್ ಬಂದ್ ಉತಾರ್‌ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-8 ಮತ್ತು ನಿಪಿ-9 ಎಂದು , ಸರ್ವೆನಂ-30/1ಕ್ಕೆ ಸಂಬಂಧಪಟ್ಟಂತೆ ಪಟ್ಟಾ ಬುಕ್ಕಿನ ಸ್ಕೆಚ್‌ನ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-10 ಎಂದು ಗುರುತಿಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ನೀಡಲಾಯಿತು)

(ತೆ ನ್ಯಾ ನ ಉ ಲೇ ಬೆ ಮಾ)

ಓ ಹೇ ಕೇ ಸ ಇ ಎ ಒ

(ಅಬ್ದುಲ್ ರಹಿಮಾನ್ ಎ. ಮುಲ್ಲಾ)
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ.